ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-1**

ಸಂ: ಎಡಿಎಂ2(2)ರ.ಅ.ಸು01/2015-16 ದಿ:25.06.2015

**<u>ಸುತ್ತೋಲೆ</u>**

ವಿಷಯ: ಮೇಲಧಿಕಾರಿಗಳ ಕಛೇರಿಗಳಿಗೆ ಹಾಜರಾಗುವ ಬೋಧಕ ಬೋಧಕೇತರ ಸಿಬ್ಬಂದಿ ಹಾಗೂ ಅಧಿಕಾರಿಗಳು ಪಾಲಿಸಬೇಕಾದ ನಿಯಮಗಳ ಬಗ್ಗೆ.

ಉಲ್ಲೇಖ: ಮಾನ್ಯ ಆಯುಕ್ತರ ಆದೇಶದ ಟಿಪ್ಪಣಿ ದಿನಾಂಕ:22.06.2015

@@@@@@

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ ಉಪನಿರ್ದೇಶಕರು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಒಳಗೊಂಡಂತೆ ಎಲ್ಲಾ ಸಿಬ್ಬಂದಿ ವರ್ಗದವರು ಕಛೇರಿ ಹಾಗೂ ಶಾಲಾ ಕರ್ತವ್ಯದ ದಿನಗಳಲ್ಲಿ ಆಯುಕ್ತರ ಕಛೇರಿಗೆ ಬರುತ್ತಿರುವುದನ್ನು ಗಮನಿಸಲಾಗಿದೆ.

ಈ ರೀತಿ ಕೆಲಸದ ದಿನಗಳಲ್ಲಿ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಚೇರಿಗೆ ಬರುವುದರಿಂದ ಕಛೇರಿ ಕೆಲಸಗಳು ವಿಳಂಬವಾಗುತ್ತದೆ ಹಾಗೂ ಶಿಕ್ಷಕರು ಶಾಲೆಗಳಲ್ಲಿ ಪಾಠ ಮಾಡಲು ನಿಗಧಿಯಾದ ಸಮಯ ಕಡಿಮೆಯಾಗುತ್ತದೆ. ಈ ಕಾರಣದಿಂದ ಆಡಳಿತಾತ್ಮಕ ಕೆಲಸಗಳಿಗಾಗಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿಗೆ ಬರಬೇಕಾದಲ್ಲಿ ಆಯಾ ಅಧಿಕಾರಿ/ನೌಕರರು ತಮ್ಮ ಮೇಲಧಿಕಾರಿಗಳ ಅನುಮತಿ ಪತ್ರದೊಂದಿಗೆ ಹಾಗೂ ಸ್ವಂತ ಕೆಲಸವಿದ್ದಲ್ಲಿ ಸೂಕ್ತ ರಜೆ ಪಡೆದು ಕಛೇರಿಗೆ ಹಾಜರಾಗುವುದು ಕಾನೂನು ರೀತಿ ಸರಿಯಾದ ಕ್ರಮ.

ಅದ್ದರಿಂದ ಎಲ್ಲಾ ಭೋಧಕ, ಬೋದಕೇತರ ಸಿಬ್ಬಂಧಿ ವರ್ಗದವರು ಈ ನಿಯಮವನ್ನು ಪಾಲಿಸುವಂತೆ ಸೂಚಿಸಲಾಗಿದೆ. ಈ ನಿಯಮವನ್ನು ಪ್ರತಿಯೊಂದು ಉಪನಿರ್ದೇಶಕರು(ಆಡಳಿತ) ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಲ್ಲಿ ಸಹಾ ಜಾರಿಗೊಳಿಸುವಂತೆ ಸೂಚಿಸಿದೆ.

25/6/15

(ಕೆ.ಎಸ್.ಸತ್ಯಮೂರ್ತಿ)
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

1)ನಿರ್ದೇಶಕರು ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ

2)ನಿರ್ದೇಶಕರು ಡಿ.ಎಸ್.ಇ.ಆರ್.ಟಿ/ ಮ್ಯಾನೇಜಿಂಗ್ ಡೈರೆಕ್ಟರ್ ಪಠ್ಯ ಪುಸ್ತಕ ಸಂಘ

3)ಸಹ ನಿರ್ದೇಶಕರು ಮದ್ಯಾಹ್ನಉಪಹಾರ ಯೋಜನೆ

4)ಸಹನಿರ್ದೇಶಕರು ಶಿಕ್ಷಕರ ಕಲ್ಯಾಣ ನಿಧಿ

5)ಯೋಜನಾ ನಿರ್ದೇಶಕರು ಸರ್ವ ಶಿಕ್ಷಾ ಅಭಿಯಾನ/ಆರ್.ಎಂ ಎಸ್.ಎ

4)ರಾಜ್ಯದ ಎಲ್ಲಾ ಉಪನಿರ್ದೇಶಕರು ಹಾಗು ಕ್ಷೇತ್ರ ಶಿಕ್ಷಣಾಧಿಕಾರಿಗಳು

5)ಉಪನಿರ್ದೇಶಕರು ಡಯಟ್ ನಗರ/ಗ್ರಾಮಾಂತರ